**ಕರ್ನಾಟಕ ಸರ್ಕಾರ**
**ಜಲಾನಯನ ಅಭಿವೃದ್ಧಿ ಇಲಾಖೆ**

ಸಂ:ಜಅಇ/ಪಿಕೋ/ ಎಫ್.ಪಿ.ಓ./24/2019-22

ಆಯುಕ್ತರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ,
7ನೇ ಮಹಡಿ, ಕೆಹೆಚ್‌ಬಿ ಸಂಕೀರ್ಣ,
ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-09,
ಇಮೇಲ್- wdd.fpo2019@gmail.com
ದಿನಾಂಕ:30.04.2020

**ಇವರಿಗೆ,**
ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು
(ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ
ಜಿಲ್ಲೆಗಳನ್ನು ಹೊರತುಪಡಿಸಿ)

**ವಿಷಯ:** ರೈತ ಉತ್ಪಾದಕರ ಸಂಸ್ಥೆಗಳ ರಚನೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ.

****

ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸಂಘಟಿಸುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸಲು ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ನೀತಿ- 2018 ಅನ್ನು ಜಾರಿಗೆ ತರಲಾಗಿದೆ. 2019-20 ನೇ ಸಾಲಿನಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲು ಈಗಾಗಲೇ 18 ಸಂಪನ್ಮೂಲ ಸಂಸ್ಥೆಗಳನ್ನು ಆಯ್ಕೆ ಮಾಡಿ ಜಿಲ್ಲೆಗಳನ್ನು ನಿಗಧಿಪಡಿಸಲಾಗಿದೆ. ಮುಂದುವರೆದು 2020-21 ನೇ ಸಾಲಿಗೆ ಕ್ರಿಯಾ ಯೋಜನೆಯನ್ನು ಹಾಗೂ ಅವಶ್ಯವಿರುವ ಅನುದಾನದ ಬೇಡಿಕೆಯನ್ನು ಸಲ್ಲಿಸಲು ಸೂಚಿಸಿದೆ.

ರೈತ ಉತ್ಪಾದಕರ ಸಂಸ್ಥೆಗಳ ರಚಿಸುವಾಗ ಕೋವಿಡ್-19 ರ ಮಾರ್ಗಸೂಚಿಯಂತೆ 1) ರೈತರನ್ನು ಸಂಪರ್ಕಿಸುವ ಸಂದರ್ಭದಲ್ಲಿ ಕನಿಷ್ಠ 2 ಮೀಟರ್ ಅಂತರವನ್ನು (ಸಾಮಾಜಿಕ ಅಂತರ) ಕಾಪಾಡುವುದು. 2)ಯೋಜನೆಯ ಅನುಷ್ಠಾನದಲ್ಲಿ ಹಾಜರಿರುವ ಇಲಾಖೆಯ ಮತ್ತು ಸಂಪನ್ಮೂಲ ಸಂಸ್ಥೆಗಳ ಸಿಬ್ಬಂದಿಗಳ ಹಾಗೂ ರೈತರ ದೇಹದ ಉಷ್ಣತೆಯನ್ನು ಪರೀಕ್ಷಿಸುವುದು. 3) ಬಟ್ಟೆಯಲ್ಲಿ ತಯಾರಿಸಲಾದ ಮುಖ ಗವಸುಗಳನ್ನು ಧರಿಸುವುದು. 4)ಯೋಜನೆಯ ಅನುಷ್ಠಾನದ ಸ್ಥಳದಲ್ಲಿ ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ನೀಡುವುದು.

**(ಪ್ರಭಾಷ್ ಚಂದ್ರ ರೇ)**
ಆಯುಕ್ತರು,
ಜಲಾನಯನ ಅಭಿವೃದ್ಧಿ ಇಲಾಖೆ

**ಪ್ರತಿಯನ್ನು:**
ರೈತ ಉತ್ಪಾದಕರ ಸಂಸ್ಥೆಗಳ ರಚನೆ ಎಂಪ್ಯಾನಲ್‌ಗೊಂಡ ಸಂಪನ್ಮೂಲ ಸಂಸ್ಥೆಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ

Scanned by CamScanner

**ಕರ್ನಾಟಕ ಸರ್ಕಾರ**
**ಜಲಾನಯನ ಅಭಿವೃದ್ಧಿ ಇಲಾಖೆ**

ಸಂ:ಜಅಇ/ಪಿಕೋ/ ಪಿಪಿಪಿ-ಐಎಡಿ/3/2020-21

ಆಯುಕ್ತರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ,
7ನೇ ಮಹಡಿ, ಕೆಹೆಚ್‌ಬಿ ಸಂಕೀರ್ಣ,
ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-09,
ಇಮೇಲ್- wdd.pppiad2017@gmail.com
ದಿನಾಂಕ:30.04.2020

**ಇವರಿಗೆ,**
ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು
ಬೆಳಗಾವಿ, ಧಾರವಾಡ, ಹಾವೇರಿ, ಬೀದರ್,
ವಿಜಯಾಪುರ, ಕಲಬುರಗಿ, ಚಿತ್ರದುರ್ಗ,
ರಾಮನಗರ, ರಾಯಚೂರು, ಬಾಗಲಕೋಟೆ
ಮತ್ತು ಗದಗ

**ವಿಷಯ:** ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ.

****

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮವನ್ನು2018-19 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿಯಲ್ಲಿ ಪೂರ್ವ ಮುಂಗಾರು ಹಾಗೂ ಮುಂಗಾರು ಹಂಗಾಮಿನಲ್ಲಿ ಕಾರ್ಯಗತಗೊಳಿಸ ಬೇಕಾಗಿರುವ ಬಿತ್ತನೆ ಬೀಜ ವಿತರಣೆ, ಪ್ರಾತ್ಯಕ್ಷಿತೆಗಳು, ಇತರೆ ಪರಿಕರಗಳ ವಿತರಣೆ ಹಾಗು ಮುಂತಾದ ಘಟಕಗಳನ್ನು ಸರ್ಕಾರಿ ಆದೇಶ ಹಾಗೂ ಈಗಾಗಲೇ ಯೋಜನಾವಾರು ನೀಡಿರುವ ಅನುಷ್ಠಾನ ಮಾರ್ಗಸೂಚನೆಯನ್ವಯ ಅನುಷ್ಠಾನಗೊಳಿಸುವುದು.

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮವನ್ನು ಕೋವಿಡ್-19 ರ ಮಾರ್ಗಸೂಚಿಯನ್ನು ಅಳವಡಿಸಿ ಅನುಷ್ಠಾನಗೊಳಿಸುವುದು.

1) ರೈತರನ್ನು ಸಂಪರ್ಕಿಸುವ ಸಂದರ್ಭದಲ್ಲಿ ಕನಿಷ್ಠ 2 ಮೀಟರ್ ಅಂತರವನ್ನು (ಸಾಮಾಜಿಕ ಅಂತರ) ಕಾಪಾಡುವುದು.
2) ಯೋಜನೆಯ ಅನುಷ್ಠಾನದಲ್ಲಿ ಹಾಜರಿರುವ ಇಲಾಖೆಯ ಮತ್ತು ಸಂಪನ್ಮೂಲ ಸಂಸ್ಥೆಗಳ ಸಿಬ್ಬಂದಿಗಳ ಹಾಗೂ ರೈತರ ದೇಹದ ಉಷ್ಣತೆಯನ್ನು ಪರೀಕ್ಷಿಸುವುದು.
3) ಬಟ್ಟೆಯಲ್ಲಿ ತಯಾರಿಸಲಾದ ಮುಖ ಗವಸುಗಳನ್ನು ಧರಿಸುವುದು.
4) ಯೋಜನೆಯ ಅನುಷ್ಠಾನದ ಸ್ಥಳದಲ್ಲಿ ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ನೀಡುವುದು.

ಮುಂದುವರೆದು 2020-21 ನೇ ಸಾಲಿಗೆ ಕ್ರಿಯಾ ಯೋಜನೆಯನ್ನು ಹಾಗೂ ಅವಶ್ಯವಿರುವ ಅನುದಾನದ ಬೇಡಿಕೆಯನ್ನು ಸಲ್ಲಿಸಲು ಸೂಚಿಸಿದೆ.

(ಪ್ರಭಾಷ್ ಚಂದ್ರ ರೇ) 30/4
ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ

**ಪ್ರತಿಯನ್ನು:**
ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

Scanned by CamScanner